ಉ ಹೌದು, ಒಂದಿದ ಇದಕ್ಕಾಗಿ ವಿದ್ಯುತ್ ಕೇಂದ್ರದ ಕೆಲಸವನ್ನು ವಿಶೇಷ 8 ತಾನು ವಿದ್ಯುತ್ ಯೋಜನೆಯಲ್ಲಿ ತೆಗೆದುಕೊಳ್ಳಲು ಪ್ರಾಮುಖ್ಯತ ನೀಡಲಾಗಿದೆ ಹಾಗೂ ಪ್ರಾರಂಭಿಕ ಕಾರ್ಯಗಳಿಗಾಗಿ ರೂ 5 ಲಕ್ಷ ರೂ ಗಳನ್ನು ಈ ವರ್ಷದ ಆಯವ್ಯಯ (2000-02)ದಲ್ಲಿ ಮೀಸಲಾಗಿಡಲಾಗಿದೆ

ಊ ಸಾಮಾನ್ಯವಾಗಿ ಕೆಲಸ ಕೈಗೆತ್ತಿಕೊಂಡ ನಂತರದ ಒಂದು ವರ್ಷದ ಕಾಲಾವಧಿಯಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದು

ತರೀಕೆರೆ ತಾಲ್ಲೂಕಿನಲ್ಲಿ ಎಂ ಯು ಎಸ್ ಎಸ್ ತೆರೆಯುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 164(421)

ಸದಸ್ಯರ ಹೆಸರು ಶ್ರೀ ನೀಲಕಂಠಪ್ಪ ಬಿ ಆರ್ (ತರೀಕೆರೆ)

ಉತ್ತರಿಸುವ ಸಚಿವರು ಶ್ರೀ ಎೀರಕುಮಾರ್ ಆ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ 1) ಶಿವನಿ, ') ಲಕ್ಕವಳ್ಳಿ, 3) ನೇರಲಕೆರೆ ಗ್ರಾಮಗಳಲ್ಲಿ ಎಂ ಯು ಎಸ್ ಎಸ್ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಈ ಮೂರು ಗ್ರಾಮಗಳಲ್ಲಿ ಎಂ ಯು ಎಸ್ ಎಸ್ ತೆರೆಯಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಳು ಯಾವ ಹಂತದಲ್ಲಿದ?

ಉತ್ತರ

ಅ) ಹೌದು

ಆ) ತರೀಕೆರೆ ತಾಲ್ಲೂಕಿನ ಶಿವನಿ ಮತ್ತು ಲಕ್ಕವಳ್ಳಿ ಗ್ರಾಮಗಳಲ್ಲಿ, ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸುವ ಕಾಮಗಾರಿಗಳಿಗೆ ನಿಗಮವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ ನೇರಲಕೆರೆ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ನಿಗಮದ ಆಡಳಿತಾತ್ಮಕ

ಅನುಮೋದನೆಯನ್ನು ಇನ್ನೂ ಪಡೆಯಬೇಕಾಗಿರುತ್ತದೆ

ಇ) ಶಿವನಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಪ್ರಸಕ್ತ ಸಾಲಿನ (2001-02) ಆಯವ್ಯಯದಲ್ಲಿ 270 ಲಕ್ಷ ರೂ ಗಳನ್ನು ಒದಗಿಸಲಾಗಿದೆ ಈ ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು "ಟರ್ನ್ ಕೀ" ಆಧಾರದಲ್ಲಿ ನಿರ್ವಹಿಸಲು ತೀರ್ಮಾನಿಸಿದ್ದು ಈ ಕಾಮಗಾರಿಯ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ ಈ ಕೆಲಸವು ಪ್ರಾರಂಭದ ಹಂತದಲ್ಲಿದೆ

ಲಕ್ಕವಳ್ಳಿ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನೂ ಸಹ "ಟರ್ನ್ ಕೀ' ಆಧಾರದಲ್ಲಿ ನಿರ್ವಹಿಸಲು ತೀರ್ಮಾನಿಸಿದ್ದು ಟೆಂಡರ್‌ನ್ನು ಆಹ್ವಾನಿಸಲಾಗಿದೆ ಈ ಕಾಮಗಾರಿಯನ್ನು ಆಯ್ಕೆಯಾದ ಗುತ್ತಿಗೆದಾರರಿಗೆ ವಹಿಸಿಕೊಟ್ಟ ನಂತರ ನಿರ್ಮಾಣ ಕೆಲಸವನ್ನು ಪ್ರಾರಂಬಿಸಲಾಗುವುದು

ನೇರಲೆಕೆರೆ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಗೆ ಪ್ರಸಕ್ತ ಸಾಲಿನ (2001-02) ಆಯವ್ಯಯದಲ್ಲಿ 5 ಲಕ್ಷ ರೂ ಗಳನ್ನು ಪೂರ್ವಭಾವಿ ಕೆಲಸಗಳಿಗಾಗಿ ಒದಗಿಸಲಾಗಿದೆ ಈ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಈ ಕಾಮಗಾರಿಗೆ ನಿಗಮದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರ, ನಿರ್ಮಾಣ ಕಾರ್ಯದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 165(455)

ಸದಸ್ಯರ ಹೆಸರು ಶ್ರೀ ಪಾಟೀಲ್ ಜೆ ಟಿ (ಬೀಳಗಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ) ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಇರುವ ವಿದ್ಯುತ್ ಉತ್ಪಾದನೆ ಎಷ್ಟು ವಿದ್ಯುತ್‌ನ ಬೇಡಿಕೆ ಎಷ್ಟು?

ಆ) ಕಳೆದ 3 ವರ್ಷಗಳಲ್ಲಿ ಹೊಸದಾಗಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ? (ವಿವರ ಕೊಡುವುದು)